**ಎಸ್.ಪಿ. ಸಾಹೇಬರು ಪೊಲೀಸನೊಬ್ಬನ ಕೈಯಲ್ಲಿದ್ದ ಲಾಠಿ ಕಸಿದುಕೊಂಡು ಚಾರ್ಜ್ ಎಂದು ದೊಡ್ಡದಾಗಿ ಕೂಗುತ್ತ ಮುಖ್ಯಮಂತ್ರಿಯವರ ಕಡೆಗೆ ನುಗ್ಗುತ್ತಿದ್ದ ಜನರಿಗೆ ಹೊಡೆಯಲು ಮುಂದಾಗುತ್ತಿದ್ದಂತೆ ಇತರ ಪೊಲೀಸರು ಲಾಠಿ ಬೀಸತೊಡಗಿದರು.**

ಸಂಜೆ ಹೊತ್ತಿಗೆ ಗೊಲ್ಲಳ್ಳಿ ಕ್ರಾಸ್‌ನಿಂದ ಹೈಸ್ಕೂಲುವರೆಗೆ, ಹೈಸ್ಕೂಲಿನಿಂದ ಊರ ಬಾಗಿಲವರೆಗೆ ಮುಖ್ಯಮಂತ್ರಿಗೆ ಸ್ವಾಗತ ಕೋರುವ ಬ್ಯಾನರುಗಳು, ಅಲ್ಲಲ್ಲಿ ಎಲ್ಲರತ್ತ ಕೈಬೀಸುತ್ತಿರುವ ನಗುಮುಖದ ಮುಖ್ಯಮಂತ್ರಿಯವರ ಆಳೆತ್ತರದ ಕಟೌಟುಗಳನ್ನು ನಿಲ್ಲಿಸಲಾಯಿತು. ಇದಕ್ಕೆಲ್ಲ ಯಾರು ಹಣ ಖರ್ಚು ಮಾಡಿದರು ಎನ್ನುವುದು ಊರವರಿಗೆ ಗೊತ್ತೇ ಆಗಲಿಲ್ಲ.

ಮುಖ್ಯಮಂತ್ರಿ ಬರುವ ದಿನ ಬಂದೇ ಬಿಟ್ಟಿತು. ಹಿಂದಿನ ರಾತ್ರಿ ಊರು ಮಲಗಲೇ ಇಲ್ಲ. ಸೂರ್ಯ ಹುಟ್ಟುವ ಮೊದಲೇ ಜನರ ಓಡಾಟ ಶುರುವಾಯಿತು. ಎಲ್ಲರಲ್ಲೂ ಒಂದು ಬಗೆಯ ಚಡಪಡಿಕೆ. ಕೆಲವರು ತುರ್ತು ಕೆಲಸಗಳನ್ನೂ ಮರೆತರು. ಹತ್ತು ಗಂಟೆ ಹೊತ್ತಿಗೆಲ್ಲ ರೆಡಿಯಾಗಿ ಇಸ್ತ್ರಿ ಬಟ್ಟೆ ತೊಟ್ಟು ಊರಿನ ಬಸ್‌ಸ್ಟ್ಯಾಂಡ್ ಬಳಿ ಬಂದು ಸೇರಿದರು. ಹನ್ನೆರಡು ಗಂಟೆ ಹೊತ್ತಿಗೆಲ್ಲ ಹೈಸ್ಕೂಲು ಮೈದಾನದಲ್ಲಿ ಐದಾರು ಸಾವಿರ ಜನರ ಗುಂಪು ಸೇರಿತು. ಮೋಡ ಮುಸುಕಿದ್ದರಿಂದ ಬಿಸಿಲು ಅಷ್ಟಾಗಿರಲಿಲ್ಲ. ದುರ್ಗ, ಹಿಂದೂಪುರದ ಕಡೆಗಳಿಂದ ಬರುವ ಬಸ್ಸುಗಳು ತುಂಬಿ, ಟಾಪಿನ ಮೇಲೂ ಕುಳಿತು ಜನ ಬರುತ್ತಲೇ ಇದ್ದರು. ನೂರಾರು ಜನ ಮೋಟರ್ ಸೈಕಲ್‌ಗಳ ಮೇಲೂ ಬಂದರು. ಹಾಗೆ ಬಂದವರಲ್ಲಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳು ಯಾರು? ವಜ್ರ ಮಹೋತ್ಸವಕ್ಕೆ ಬಂದವರ್‍ಯಾರು? ಜನತಾ ದರ್ಶನಕ್ಕೆ ಬಂದವರ್‍ಯಾರು? ಮುಖ್ಯಮಂತ್ರಿನೋಡಲು ಬಂದವರು ಯಾರು? ಎನ್ನುವುದು ಗೊತ್ತೇ ಆಗಲಿಲ್ಲ. ಹೈಸ್ಕೂಲು ಆರಂಭವಾದಾಗ ಇದ್ದ ಮೂವರು ಮೇಷ್ಟರು ಬಂದರು. ಪುರುಷೋತ್ತಮ ಅವರನ್ನು ಬಸ್ಸಿನಿಂದ ಇಳಿಸಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋದ. ಮೂವರು ಮೇಷ್ಟರೂ ಹಣ್ಣಾಗಿ ಹೋಗಿದ್ದರು. ಊರ ಜನರಿಗೆ ಅವರ ಗುರುತೇ ಸಿಗಲಿಲ್ಲ!

ಹತ್ತಕ್ಕೂ ಹೆಚ್ಚು ಊಟದ ಕೌಂಟರುಗಳ ಮುಂದೆ ಪರ ಊರುಗಳಿಂದ ಬಂದವರು ಸಾಲುಗಟ್ಟಿ ನಿಂತರೆ ಇನ್ನು ಕೆಲವರು ಜನತಾ ದರ್ಶನದ ಕ್ಯೂನಲ್ಲಿ ನಿಂತರು. ಹೈಸ್ಕೂಲು ಮೈದಾನ, ಊರ ರಸ್ತೆಯಲ್ಲಿ ಪೊಲೀಸರು ಧಾಳಾಗಿ ಕಾಣುತ್ತಿದ್ದರು. ನಡುನಡುವೆ ಗರಿ ಗರಿ ಖಾದಿ ಬಟ್ಟೆ ತೊಟ್ಟ ಬಿಳಿಕೊಕ್ಕರೆಗಳಂತಹ ಪುಢಾರಿಗಳು. ಅವರ ಕೈಯಲ್ಲಿ ಸುತ್ತಿ ಹಿಡಿದ ಅರ್ಜಿಗಳು. ಜನತಾ ದರ್ಶನದಲ್ಲಿ ಹಣಕಾಸಿನ ನೆರವು ಕೇಳಲು ರೋಗ ಪೀಡಿತ ಅಪ್ಪ, ಅಮ್ಮಂದಿರನ್ನೂ, ವಿಕಲಾಂಗ ಮಕ್ಕಳನ್ನೂ ಕೆಲವರು ಕರೆತಂದಿದ್ದರು. ಹತ್ತಾರು ಜನ ಏದುಸಿರು ಬಿಡುತ್ತ ಮುಖ್ಯಮಂತ್ರಿಗಾಗಿ ಪ್ರತ್ಯೇಕ ಸಾಲಿನಲ್ಲಿ ಕಾದು ಕೂತಿದ್ದರು.

ಇನ್ನೇನು ಸ್ವಲ್ಪ ಹೊತ್ತಿಗೆಲ್ಲ ಮುಖ್ಯಮಂತ್ರಿ ಬರುತ್ತಾರೆಂಬ ನಿರೀಕ್ಷೆಯಲ್ಲಿ ಜನರು ಇರುವಾಗಲೇ ಮತ್ತೆ ಏಳೆಂಟು ಪೊಲೀಸ್ ವ್ಯಾನುಗಳು ದುರ್ಗದ ಕಡೆಯಿಂದ ಬಂದವು. ಒಂದು ವ್ಯಾನಿನಲ್ಲಿ ಐದಾರು ನಾಯಿಗಳು! ಪೊಲೀಸರು ಅವನ್ನು ಜೋಪಾನವಾಗಿ ಇಳಿಸಿಕೊಂಡು ಮುಖ್ಯಮಂತ್ರಿ ಸಭೆ ನಡೆಸುವ ದೊಡ್ಡ ಹಾಲ್‌ನೊಳಕ್ಕೆ, ಅಲ್ಲಿಂದ ಮೈದಾನದ ತುಂಬೆಲ್ಲಾ ಓಡಾಡಿಸಿಕೊಂಡು ಬಂದರು. ಪೊಲೀಸ್ ನಾಯಿಗಳು ನೆಲ ಮೂಸುತ್ತ ಓಡುತ್ತಿದ್ದವು. ಅವರ ಹಿಂದೆ ಕೆಲ ಪೊಲೀಸರು. ಜನರಿಗೆ ಮೋಜು ಅನ್ನಿಸಿತು. ನಿನ್ನೆಯಿಂದ ಊರಲ್ಲೇ ಇರುವ ಪೋಲಿಸರಲ್ಲದೆ ಇನ್ನಷ್ಟು ಮಂದಿ ಬಂದದ್ದನ್ನ